ಇ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ಸರಿಗೆಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು)—

ಅ) ಈ ವಿಷಯದಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭ರ ಮುದ್ರಾಂಕ ಶುಲ್ಕದ ಅನುಚ್ಛೇದ ೨೦ರ ರೀತ್ಯ ಪ್ಲಾಟುಗಳ ವರ್ಗಾವಣೆ ಮಾರುಕಟ್ಟೆ ಮೌಲದ ಮೇಲೆ ಮುದ್ರಾಂಕ ಶುಲ್ಕವನ್ನು ಅಂದರೆ ೧೦೦ ರೂ.ಗಳ ಮೌಲ್ಯಕ್ಕೆ ೧೦೦ ರೂ.ಗಳ ಶುಲ್ಕವನ್ನು ಮತ್ತು ಶೇಕಡ ೧೦ರಂದ ಹಿರ ಪರಿವಿಗೆ ಅಧಿಭಾರ ಶುಲ್ಕವನ್ನು ಆಯಾ ಸ್ಥಳಗಳಲ್ಲಿ ಜಾರಿಯಲ್ಲಿರುವ ದರದಂತೆ ಆಕರಣೆ ಮಾಡಲಾಗುವುದು.

ಆ) ಪ್ರತಿಯೊಂದು ಪ್ಲಾಟುಗಳ ವರ್ಗಾವಣೆಯ ಸಮಯದಲ್ಲಿ ನೋಂದಣಿ ಶುಲ್ಕವನ್ನು ಪ್ರತಿಯೊಂದು ಪ್ಲಾಟುಗಳ ನಿರ್ಮಿತ ಪ್ರದೇಶ (ಬಿಲ್ಟ್ ಅಪ್ ಏರಿಯಾ)ದ ಮೇಲೆ ವಿಧಿಸುವುದು ಮಾತ್ರವಲ್ಲದೆ ಬಹು ಅಂತಸ್ತುಗಳ ಕಟ್ಟಡದಲ್ಲಿ ಈ ಪ್ಲಾಟುಗಳನ್ನು ನಿರ್ಮಿಸಿರುವ ಭೂಮಿಯ ಪ್ರದೇಶದ ಪ್ರಮಾಣದ ಪ್ರೊಪೋರ್ಷನೇಟ್ ಏರಿಯಾ ಆಫ್ ಲ್ಯಾಂಡ್) ಮೇಲೂ ವಿಧಿಸಲಾಗುತ್ತಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಶಾಸ್ತ್ರೀಯವಾದ ಅವೈಜ್ಞಾನಿಕವಾದ ಆಡಿಟ್ ಫೀ

೨೩೦. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಗೆ ಆಡಿಟ್ ಫೀ ಅಶಾಸ್ತ್ರೀಯವೂ ಅವೈಜ್ಞಾನಿಕವೂ ಅತ್ಯಂತ ದುಬಾರಿಯೂ ಆಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿರುವುದೇ ;

ಆ) ಹಾಗಿದ್ದಲ್ಲಿ ನ್ಯಾಯಂ ಸಮ್ಮತವಾದ ಶುಲ್ಕ ವಿಧಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು, ಹಾಗೂ ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು)—

ಅ) ಈಗ ವಿಧಿಸಲಾಗುತ್ತಿರುವ ಲೆಕ್ಕ ಪರಿಶೋಧನಾ ಶುಲ್ಕವು ಸಹಕಾರ ಸಂಘಗಳ ಸೇವಾ ವೆಚ್ಚ ಹಾಗೂ ಸಂಸ್ಥೆಯ ವ್ಯವಹಾರದ ಸ್ವರೂಪ ಮತ್ತು ಪರಿಮಾಣವನ್ನು ಗಣನೆಗೆ ತೆಗೆದುಕೊಂಡು ನಿಗದಿತ ಪಡಿಸಲ್ಪಟ್ಟಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಅಂಗನವಾಡಿ ಕೇಂದ್ರಗಳ ಸ್ಥಾಪನೆ ಬಗ್ಗೆ

೩೬೧. ಶ್ರೀ ಎಂ. ಶಿವಣ್ಣ (ಹೆಗ್ಗದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ ; ಹಾಗೂ ಅವುಗಳ ಸಂಖ್ಯೆ ಎಷ್ಟು ; ಇನ್ನೂ ಎಷ್ಟು ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕಾಗಿದೆ ;

ಆ) ಹೊಸದಾಗಿ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ;

ಇ) ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—

ಅ) ರಾಜ್ಯದಲ್ಲಿ ಒಟ್ಟು ೨೧ ತಾಲ್ಲೂಕುಗಳಲ್ಲಿ ೧೪,೧೯ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇವುಗಳಲ್ಲಿ ೬ ಯೋಜನೆಗಳು ನಗರ ಪ್ರದೇಶದಲ್ಲಿರುತ್ತದೆ. ಇನ್ನು ೮೧ ತಾಲ್ಲೂಕುಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಬೇಕಾಗಿದೆ.

ಆ) ಇದೆ. ಈ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಇ) ಅಂಗನವಾಡಿ ಕೇಂದ್ರಗಳಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೧. ಪೂರಕ ಪೌಷ್ಟಿಕ ಆಹಾರ
೨. ಶಾಲಾ ಪೂರ್ವ ಶಿಕ್ಷಣ
೩. ರೋಗನಿರೋಧಕ ಚುಚ್ಚುಮದ್ದು
೪. ಪೌಷ್ಟಿಕ ಆಹಾರ ಮತ್ತು ಆರೋಗ್ಯ ಶಿಕ್ಷಣ
೫. ದೊಡ್ಡ ಆಸ್ಪತ್ರೆಗಳಿಗೆ ಕಳುಹಿಸುವ ಸಲಹಾ ಸೇವೆ
೬. ವೈದ್ಯರಿಂದ ಆರೋಗ್ಯ ತಪಾಸಣೆ.

ಜಮೀನಿನ ಸಾಗುವಳಿಯ ಬಗ್ಗೆ

೪೧೯. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಂಧಗಿರಿ ತಾಲ್ಲೂಕು, ಕೋಟಗಾರಲಹಳ್ಳಿ ಸರ್ವೆ ಸಂಖ್ಯೆ ; ೨೫ಳರಲ್ಲಿ ೨೩ಳ ಎಕರೆ ೩೦ ಗುಂಟೆ ಹಾಗೂ ಸರ್ವೆ ಸಂಖ್ಯೆ ; ೨೬೧ರಲ್ಲಿ ೬೪ ಎಕರೆ ಜಮೀನನ್ನು ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಮೇಲ್ಕಂಡ ಸರ್ವೆ ಸಂಖ್ಯೆಯಲ್ಲಿ ಎಷ್ಟು ಜನರಿಗೆ ಎಷ್ಟೆಷ್ಟು ಎಕರೆಗೆ ಪಹಣಿಯನ್ನು ನಮೂದು ಮಾಡಲಾಗಿದೆ ಹಾಗೂ ಸಾಗುವಳಿ ಮಾಡಲು ಮಂಜೂರಾತಿ ನೀಡಲಾಗಿದೆಯೆ ;

ಇ) ಸ್ಥಳ ಪರಿಶೀಲನೆ ಮಾಡಿ ಪಹಣಿಯನ್ನು ಬರೆಯಲಾಗಿದೆಯೇ ಹಾಗೂ ಬಡವರಂ ಸಾಗುವಳಿ ಮಾಡಿರುವ ಜಮೀನಿಗೆ ಸಂಬಂಧಿಸಿದಂತೆ ತಪ್ಪಾಗಿ ಬರೆದಿರುವ ಪಹಣಿಯನ್ನು ಸರಿಪಡಿಸಲಂ ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಕೋಟಗಾರಲಹಳ್ಳಿ ಸರ್ವೆ ಸಂಖ್ಯೆ : ೨೫ಳರಲ್ಲಿ ೫೭ ಜನರಿಗೆ ೨೦೪ ಎಕರೆ ೨೦ ಗುಂಟೆ ಮತ್ತು ಸರ್ವೆ ನಂಬರ್ ೨೬೧ರಲ್ಲಿ ೭ ಜನರಿಗೆ ೧೪ ಎಕರೆ ೨೦ ಗುಂಟೆ ಪಹಣಿ ಬರೆಯಲಾಗಿದೆ. ಅಲ್ಲದೆ, ಸರ್ವೆ ನಂ. ೨೫ಳರಲ್ಲಿ ೩೦ ಜನರಿಗೆ ೮೭ ಎಕರೆ ೨೨ ಗುಂಟೆ ಜಮೀನನು ಸಾಗುವಳಿ ಮಾಡಲು ಮಂಜೂರು ಮಾಡಲಾಗಿದೆ.

ಇ) ಸ್ಥಳ ಪರಿಶೀಲನೆ ಮಾಡಿ ಪಹಣಿಯನ್ನು ಬರೆಯಲಾಗಿದೆ. ಒಂದು ವೇಳೆ ಬಡವರಿಗೆ ಅನ್ಯಾಯವಾಗಿದ್ದರೆ ಅದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ, ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.